Reg No. B G 155 21-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರಧಾನರೇ ಬೇರೆ ಪಕ್ಷ ಸ್ಥಾಪನೆ ಮಾಡಲಿ

ಡಿ ಎಂ ಕೆ ಚಳವಳಿ

ಮದರಾಸು— ಡಿ ಎಂ ಕೆ ಕೇಂದ್ರದಿಂದ ಹೆಚ್ಚು ಅಧಿಕಾರ ಪಡೆಯುವವರೆಲ್ಲಿ ವಿಫಲಗೊಂಡರೆ, ತಾನೇ ಚಳವಳಿ ಹೂಡುವುದಾಗಿ ಆಡಳಿತಪಕ್ಷ ಡಿ ಎಂ ಕೆ ನಾಯಕ ಮತ್ತು ಮುಖ್ಯ ಮಂತ್ರಿ ಕರುಣಾನಿಧಿ ಹೇಳಿದರು.

★

ಹಿಮಾಲಯದ ವಯಸ್ಸು

ಚಂಡೀಘರ— ಹಿಮಾಲಯಾ ಪರ್ವತದ ಬಂಡೆಗಳ ವಾಸಂಗದಿಂದ ವಿಶ್ವದ ಅತಿ ಎತ್ತರವಾದ ಈ ಪರ್ವತಗಳ ವಯಸ್ಸು 20 ಮಿಲಿಯಗಳಿಂದ 2 ಮಿಲಿಯಗಳಷ್ಟೆಂದು ಅಭಿಪ್ರಾಯ ಪಡಲಾಗಿದೆ.

★

ಪ್ರತಿಭಟನೆ

ವಿದ್ಯುಚ್ಛಕ್ತಿ ದರ ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಚಿಕ್ಕಬಳ್ಳಾಪುರ, ಉಡುಪಿ, ಮುಂತಾದ ಅನೇಕ ಕಡೆ ಪ್ರದರ್ಶನಗಳು ನಡೆದವು.

★

ಇನ್ನೂ ಯೋಜನೆಯಲ್ಲೇ ಇದೆ

ನವದೆಹಲಿ— ಪ್ರಧಾನಿಗಳ ಹೊಸ ಅಧಿಕೃತ ನಿವಾಸದ ಕಾರ್ಯವು ಇನ್ನೂ ಯೋಜನಾ ಸ್ಥಿತಿಯಲ್ಲೇ ಇದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ನ್ಯಾಯಬಾಹಿರ

ವಿಶಾಖಪಟ್ಟಣ— 1800 ಡಾಕ್ ಕೆಲಸಗಾರರ ಮುಷ್ಕರ ನ್ಯಾಯಬಾಹಿರವೆಂದು ಸಾರಲಾಯಿತು.

★

ದಿವ್ಯವಾಣಿ

ಹಣವಿಲ್ಲದಿರುವುದೇ ಅನೇಕ ಕೆಡಕುಗಳಿಗೆ ಮೂಲ. — ಬರ್ನಾರ್ಡ್ ಷಾ

ಇವರಿಗೇನು ಅಧಿಕಾರ

ನವದೆಹಲಿ— ಓರ್ವ ಪಾರ್ಟಿ ಸದಸ್ಯರ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳಲು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೂ ಮಿತಲಂಗಿ ಕಾಂಗ್ರೆಸ್ ಅಧ್ಯಕ್ಷರು ನಡೆಯಬಹುದೆ ಎಂಬ ಸಂಶಯವನ್ನು ಪ್ರಧಾನಿ ಇಂದಿರಾರವರು ವ್ಯಕ್ತಪಡಿಸಿದರು – 9 ಹಿಂದಿ ಮಾತಾಡದ ರಾಜ್ಯಗಳ 100 ಸದಸ್ಯರನ್ನು ಕುರಿತು ತಮ್ಮ ನಿವಾಸದಲ್ಲಿ ಹೇಳಿದರು.

●

ವಾಪಸ್ಸು ತೆಗೆದುಕೊಳ್ಳುವುದಿಲ್ಲ

ನವದೆಹಲಿ— ಪ್ರಧಾನಿ ಇಂದಿರಾ ಮಿತ್ತಿತರರ ಮೇಲೆ ಹೊರಡಿಸಿರುವ ಜೋ ಕಾಸ್ ನೋಟೀಸನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿದರು.

★

ಸಸ್ಪೆಂಡ್

ಬೆಂಗಳೂರು— ಶಾಸನ ಸಭೆಯ ಈಗಿನ ಅಧಿವೇಶನ ಪೂರ್ತಿ ಸ್ವತಂತ್ರ ಸದಸ್ಯ ಶ್ರೀ ವಾಟಾಲ್ ನಾಗರಾಜರು ಮಂಗಳವಾರ ಸಸ್ಪೆಂಡು ಮಾಡಲ್ಪಟ್ಟರು.

★

ಸಂಬಳ ಹೆಚ್ಚುವದು

ಬೆಂಗಳೂರು— ಎಲೆಕ್ಟ್ರಿಸಿಟಿ ಬೋರ್ಡಿನ ನೌಕರರ ಸಂಬಳವನ್ನು ಕೂಡಲೇ ಕೇಳಿಕ ಡಾ 10 ರಷ್ಟು ಹೆಚ್ಚಿಸಲು ಅಧ್ಯಕ್ಷರು ನಿರ್ಧರಿಸಿರುವರೆಂದು ಗೊತ್ತಾಗಿದೆ.

★

ಮುಷ್ಕರ ಪ್ರಾರಂಭ

ಮೈಸೂರು— ಹೌಸ್ ಸರ್ಜನ್ನರ ಅನಿರ್ದಿಷ್ಟ ಕಾಲದ ಮುಷ್ಕರ ಪ್ರಾರಂಭವಾಯಿತು

●

ಕೋಟಿ ಚಂಡಿ ಯಜ್ಞ

ಸುರೇಂದ್ರನಗರ— ರಾಜ್ಯ ಸರಕಾರದ ತೀವ್ರ ವಿರೋಧವಿದ್ದರೂ ಕಾರ್ಯಪುರದಲ್ಲಿ ನಡೆಸಲು ಯೋಜಿಸಿರುವ ಕೋಟಿ ಚಂಡಿ ಯಜ್ಞಕ್ಕೆ ಏರ್ಪಾಡುಗಳು ಭರದಿಂದ ಸಾಗುತ್ತಿದೆ – ಯಜ್ಞಕ್ಕೆ ಬೆಂಬಲ ಪಡೆಯಲು ವ್ಯವಸ್ಥಾಪಕ ಲಕ್ಷ್ಮಣಜೀಯವರು ಮುಖ್ಯ ರಸ್ತೆಗಳಲ್ಲಿ ಭಾರಿ ಮೆರವಣಿಗೆ ನಡೆಸಿದರು – 1 ಮೈಲಿ ಉದ್ದದ ಮೆರವಣಿಗೆಯಲ್ಲಿ ಒಂದು ಲಕ್ಷ ಜನ ಭಾಗವಹಿಸಿದ್ದರು – ಸರಕಾರ 10 ಕಿಲೋಗಿಂತ ಆಹಾರೇತರ ಉಪಯೋಗಿಸುವದನ್ನು ಪ್ರತಿಬಂಧಿಸಿರುವದರಿಂದ ಧಾನ್ಯದ ಬದಲು ತರಕಾರಿ ಉಪಯೋಗಿಸಲಾಗುವುದೆಂದಿರುವರು.

●

ಅಮೇರಿಕಾ ಗ್ರಾಂಟು

ಬೆಂಗಳೂರು— ಮಾನಸಿಕ ಆರೋಗ್ಯ ಸಂಸ್ಥೆಗೆ ಅಮೇರಿಕಾ ಆರೋಗ್ಯ ಇಲಾಖೆಯು ರೂ. 870600 ಗ್ರಾಂಟು ಕೊಟ್ಟಿದೆ

ಗಿರಿಯವರ ಗೆಲುವು

ಭಾರತದ ರಾಷ್ಟ್ರಪತಿ ಚುನಾವಣೆಯಲ್ಲಿ ಶ್ರೀ ವಿ ವಿ ಗಿರಿಯವರು ಗೆಲವನ್ನು ಪಡೆದರು

ಮೊದಲನೆಯ ಸುತ್ತಿನಲ್ಲಿ ಶ್ರೀ ವಿ ವಿ ಗಿರಿಯವರಾಗಲೀ, –ಶ್ರೀ ಎಸ್ ಸಂಜೀವರೆಡ್ಡಿಯವರಾಗಲೀ ಗೆಲ್ಲಲಿಲ್ಲ

ಎರಡನೇ ಸುತ್ತಿನ ಎಣಿಕೆಯಲ್ಲಿ ಗಿರಿಯವರು ಗೆದ್ದರು

ಇಲ್ಲೂ ಲಾಟರಿ

ಬೆಂಗಳೂರು— ಮೈಸೂರು ರಾಜ್ಯದಲ್ಲಿ ಈ ವರ್ಷ ಅಕ್ಟೋಬರಿನಿಂದ ಲಾಟರಿ ಜಾರಿಗೆ ತರುವದಾಗಿ ಶಾಸನಸಭೆಯಲ್ಲಿ ತಿಳಿಸಲಾಯಿತು

ಇಂದಿರಾರವರು ಬೇರೆ ಪಾರ್ಟಿ ಸ್ಥಾಪಿಸಲಿ

ನವದೆಹಲಿ— ಇಂದಿರಾರವರು ಪಾರ್ಟಿಯನ್ನು ಬಿಟ್ಟು ಬೇರೆ ಪಾರ್ಟಿ ಸ್ಥಾಪಿಸಲಿ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪಾರ್ಟಿ ಉಪನಾಯಕ ಎಸ್ ಎನ್ ಮಿಶ್ರಾ ಹೇಳಿದರು.

★ನವದೆಹಲಿ— ಜೋ ಕಾಸ್ ನೋಟೀಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ಅಧ್ಯಕ್ಷ ನಿಜಲಿಂಗಪ್ಪನವರಿಗೆ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಮುಖ್ಯಹ್ಮಣ್ಯಂ ಬರೆದಿರುವರು.

ಮುಂದುವರಿದ

ಟೆಂಡರ್ ಪ್ರಕಟಣೆ

ನಂ. ಪಿಹೆಚ್ಇ/ಡಿಬಿ/ಟಿಇಎಂಡಿ/69-70/
6255–88//ಡಿಟಿ
ತಾ. 12–8–69

ವಿಷಯ : ಕೊಳ್ಳೇಗಾಲದಲ್ಲಿ 13.64 ಲಕ್ಷ ಲೀಟರ್‌ಗಳ ಸಾಮರ್ಥ್ಯವುಳ್ಳ ಒಂದು ನೆಲಮಟ್ಟದ ವೃತ್ತಾಕಾರದ ಆರ್.ಸಿ.ಸಿ ಜಲಾಶಯ ನಿರ್ಮಾಣಕ್ಕಾಗಿ ಟೆಂಡರ್ ಈ ಕಚೇರಿ ನಂ. ಪಿಹೆಚ್ಇ/ಡಿಬಿ/ಟಿಇಎಂಡಿ/69–70/5256–95 ತಾ. 26-7-1969 ರ ಸೂಚನೆ.

ಮೇಲೆ ಸೂಚಿಸಿರುವ ಕೆಲಸಕ್ಕಾಗಿ ಟೆಂಡರುಗಳನ್ನು ಸ್ವೀಕರಿಸುವ ಕಡೆಯ ತಾರೀಖನ್ನು ಈ ಹಿಂದೆ ಪ್ರಕಟಿಸಿದಂತೆ 14–8–1969 ರ ಬದಲು 25–8–1969 ನೇ ಮಧ್ಯಾಹ್ನ 4 ಘಂಟೆವರೆಗೆ ಮುಂದುವರಿಸಿದೆ ಎಂದು ಅಪೇಕ್ಷಿಸುವ ಟೆಂಡರುದಾರರ ಅನುಕೂಲಕ್ಕಾಗಿ ಈ ಮೂಲಕ ಪ್ರಕಟಿಸಿದೆ. ಫಾರಂಗಳನ್ನು ತಾ. 23–8–1969 ರವರೆಗೆ ಕಚೇರಿ ವೇಳೆಗಳಲ್ಲಿ, ಮೈಸೂರು-ಪಿರಿಯಾಪಟ್ಟಣದಲ್ಲಿರುವ, ಪಿ.ಹೆಚ್.ಇ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಂದ ಪಡೆಯಬಹುದು. ಇತರ ಷರತ್ತುಗಳು ಬದಲಾವಣೆ ಇಲ್ಲವೆ ಹಾಗೇ ಇವೆ.

ಸಹಿ / ಎಸ್. ಆರ್. ಸುಬ್ಬರಾವ್
ಎಕ್ಸಿಕ್ಯೂಟಿವ್ ಇಂಜಿನಿಯರ್
ಪಿಹೆಚ್ಇ ವಿಭಾಗ, ಮೈಸೂರು

ನವನಾಗರೀಕತೆ ಕಾಣದ ಜನರು

ಕಡಲೂರು— ಇಲ್ಲಿಗೆ 200 ಕಿಲೋಮೀಟರು ದೂರದಲ್ಲಿರುವ ಜಗೀರ್ ಬೆಟ್ಟಗಳೆಂಬ ಐದು ಬೆಟ್ಟಗಳ ಮೇಲೆ 25000 ಮಂದಿಯ ಜನಾಂಗ ವಾಸಿಸುತ್ತಿದೆ ; ವರ್ಷಾಂತರಗಳಿಂದ ಅಲ್ಲಿರುವ ಈ ಜನರು ಮೈದಾನದಲ್ಲಿರುವ ಜನರ ಸಂಪರ್ಕವಿಲ್ಲದೆ ನವನಾಗರೀಕತೆಯ ಅನುಭವವಿಲ್ಲದವರಾಗಿ ಜೀವಿಸುತ್ತಿರುವರು. ಈ ಬೆಟ್ಟಗಳ ಅರಣ್ಯಗಳಲ್ಲಿ ರಸ್ತೆಗಳಾಗಲೀ ಕಾಲುದಾರಿಗಳಾಗಲೀ ಇಲ್ಲ : 10–15 ಮನೆಗಳುಳ್ಳ ಗ್ರಾಮಗಳಿವೆ ; 5 ಬೆಟ್ಟಗಳಿಂದ 5 ನದಿಗಳು ಹರಿಯುತ್ತವೆಯಾದರೂ, ಜರಿಗಳಿಂದ ಜೊಳೆಗಳಿಂದ ನೀರು ತರಲು ಮೈಲಿಗಟ್ಟಲೆ ನಡೆಯಬೇಕಾಗಿದೆ. ರಾಗಿ, ಜೋಳ ಬೆಳೆಯುತ್ತಾರೆ, ಹಂದಿ ಸಾಕುತ್ತಾರೆ. ಸೀಮೆಎಣ್ಣೆ, ಉಪ್ಪು, ಇತರ ಅತ್ಯವಶ್ಯಕ ಪದಾರ್ಥಗಳನ್ನು ಪಡೆಯಲು ಕೆಲ ಗ್ರಾಮಸ್ಥರು 20 ಮೈಲಿಗಳಷ್ಟೂ ಹೋಗಬೇಕಾಗಿವೆ. ಬಹು ಹೆಚ್ಚು ಮಂದಿ ನಿರಕ್ಷರಸ್ಥರು – ಇವರಿಗೆ ಚಲನವಲನ, ಪ್ರವರ್ತನ ತಿಳಿಯರು – ಸರಕಾರದಿಂದ ಏನನ್ನೂ ಕೇಳಿಲ್ಲ — ಇಲ್ಲಿ ವಿಧವೆಯರಿಲ್ಲ ; ಗಂಡ ಸತ್ತು ಶವ ಹೊಳುವುದರಲ್ಲಿಯೇ ಬೇರೊಬ್ಬ ಗಂಡನನ್ನು ಒದಗಿಸಲಾಗುವುದು : ಅನೇಕ ಸಂದರ್ಭಗಳಲ್ಲಿ ಹೆಂಡತಿಗಿಂತ ಗಂಡ ಚಿಕ್ಕವನಾಗಿರುತ್ತಾನೆ

ಹಿತಭೋಧೆ

ಸ್ವಾನುಭವವಿಲ್ಲದವನು ಪರಾನುಭವವನ್ನು ತಿರಸ್ಕರಿಸುವದುಂಟು : ಸ್ವಾನುಭವ ಉಳ್ಳವನು ಪರಾನುಭವವನ್ನು ತಿರಸ್ಕರಿಸಿಬಿಡುತ್ತಾನೆ.

ದುಡಿಯುವವನು ತನ್ನ ಲಾಭಕರವಾದ ಕೆಲಸವನ್ನು ಒಂದೇ ಮನಸ್ಸಿನಿಂದ ಮಾಡುತ್ತಿದ್ದಾನೆ : ಕೂತಿರುವವನು ಅವನ ಲಾಭದಲ್ಲಿ ಮಾತ್ರ ತನಗೆ ಲಾಭ ಬರುವುದಕ್ಕೆ ಸರಿಯಾದ ಮಾರ್ಗ ಹುಡುಕುತ್ತಾ ಇದ್ದಾನೆ

ಉಪಕಾರವೂ ಅಪಕಾರವೂ ಪ್ರತಿಫಲಾಪೇಕ್ಷಿಗಳಾಗಿವೆ ; ಉಪಕಾರಕ್ಕೆ ಮೇಲೂ ಅಪಕಾರಕ್ಕೆ ಕೇಡೂ ಪ್ರತಿಫಲಗಳು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H, the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಜಯಪ್ರದ 4 ನೇ ವಾರ

ವುಡ್‌ಲ್ಯಾಂಡ್ ಟಿ ಸ್ಟಾ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮೂ, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ತಾ. 15–8–69 ರಿಂದ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ಸಪ್ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಶನ್
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಶುಸಂಪತ್ತಿನ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ನೀಡಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara N
M S Krishna Rao (Proprietor) at the Satyavadi P
Chamarajapuram, Mysore 4